**VIVEK SUBBA REDDY**

Senior Advocate
High Court of Karnataka

No 200 ,11th cross ,
Wilson Garden
Bangalore 27
Ph no - 9880109066

**ದಿನಾಂಕ** :21.05.2021

**ಗೆ,**
**ಶ್ರೀನಿವಾಸ ಬಾಬು**
**ಗೌರವಾನ್ವಿತ ಅಧ್ಯಕ್ಷರು,**
**ಕರ್ನಾಟಕ ರಾಜ್ಯ ವಕೀಲರ ಪರಿಷತ್ತು,**
**ಬೆಂಗಳೂರು.**

**ಮಾನ್ಯರೇ,**
**ವಿಷಯ: ವಕೀಲರಿಗೆ ಪರಿಹಾರ ಘೋಷಣೆ ಮಾಡಿದ್ದಕ್ಕಾಗಿ ಅಭಿನಂದನಾ ಪತ್ರ ಹಾಗೂ ಹೆಚ್ಚಿನ ಸಹಾಯಕ್ಕಾಗಿ ಮನವಿ.**

**ಇತ್ತೀಚೆಗೆ ಕೊರೊನ ಎರಡನೇ ಅಲೆಯಲ್ಲಿ ಕೋವಿಡ್ ಸೋಂಕಿತ ವಕೀಲರುಗಳಿಗೆ, ಮನೆಯಲ್ಲೇ ಐಸೋಲೇಶನ್ನಲ್ಲಿದ್ದವರಿಗೆ ರೂ.10,000/-, ಆಸ್ಪತ್ರೆಗೆ ದಾಖಲಾದವರಿಗೆ ರೂ.25,000/- ಪರಿಹಾರ/ ಸಹಾಯಧನ ಕೊಡಲು ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ತೀರ್ಮಾನಿಸಿರುವುದು ಅಭಿನಂದನಾರ್ಹ, ನಿಮ್ಮಲ್ಲಿರುವ ಸಂಪನ್ಮೂಲದ ಮಿತಿಯಲ್ಲಿ ನೀವು ಈ ತೀರ್ಮಾನ ಮಾಡಿರುವುದಕ್ಕಾಗಿ ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷರು ಮತ್ತು ಎಲ್ಲ ಸದಸ್ಯರಿಗೂ ಧನ್ಯವಾದಗಳನ್ನು ತಿಳಿಸುತ್ತಾ ಈ ಮೂಲಕ ಅಭಿನಂದಿಸಲು ಇಚ್ಛಿಸುತ್ತೇನೆ.**
**ರಾಜ್ಯದ ವಕೀಲರು ಸಂಕಷ್ಟದಲ್ಲಿರುವಂತಹ ಈ ಸಂಧರ್ಭದಲ್ಲಿ ಇಂತಹ ತೀರ್ಮಾನದ ಅಗತ್ಯವಿತ್ತು ಎಂಬುದು ನನ್ನ ಅಭಿಪ್ರಾಯ.**
**ಲಾಕ್ ಡೌನ್ ಮುಂದುವರಿಕೆಯಿಂದ ಅನೇಕ ವಕೀಲ ಸಹೋದರರು ಬೆಂಗಳೂರನ್ನು ತೊರೆಯುತ್ತಿದ್ದಾರೆ, ಅನೇಕರ ಜೀವನ ಮತ್ತು ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮವಾಗುತ್ತಿದೆ ಅಲ್ಲದೆ ಇದರಿಂದ ವಕೀಲರ ಮಾನಸಿಕ ಸ್ಥೈರ್ಯವು ಕುಗ್ಗುತ್ತಿದೆ. ವಕೀಲರು ಇಂತಹ ದುಃಸ್ಥಿತಿಯಿಂದ ಹೊರಬರಲು ಕರ್ನಾಟಕ ವಕೀಲರ ಪರಿಷತ್ತಿನ ಮುಖಾಂತರ ವಕೀಲರಿಗೆ ಇನ್ನೂ ಹೆಚ್ಚಿನ ಸಹಾಯ ಮಾಡಲು ಯೋಜನೆಗಳನ್ನು ರೂಪಿಸಬೇಕೆಂದೂ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.**
**ಹಾಗೂ ಈ ನಿಟ್ಟಿನಲ್ಲಿ ವಕೀಲರಿಗೆ ಹೆಚ್ಚಿನ ಪರಿಹಾರವನ್ನು ಒದಗಿಸಬೇಕೆಂದು ಸರ್ಕಾರವನ್ನೂ ಒತ್ತಾಯಿಸುತ್ತೇನೆ.**

**ವಂದನೆಗಳೊಂದಿಗೆ....**

**ವಿವೇಕ್ ಸುಬ್ಬಾ ರೆಡ್ಡಿ**
**ಹಿರಿಯ ವಕೀಲರು**
**ಕರ್ನಾಟಕ ಹೈಕೋರ್ಟ್, ಬೆಂಗಳೂರು.**